**ದಿನಾಂಕ: 05-12-2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಬಿ ಎಸ್ ಜಿ ಎಸ್ ವಕೀಲರಿಂದ ಎದುರುದಾರರ ಪರವಾಗಿಃ**

**5**) ಮೃತ ವೇಣುಗೋಪಾಲ್ ನನ್ನ ಮಗ. ನನಗೆ ಒಬ್ಬ ಮಗ ಮತ್ತು ಒಬ್ಬ ಮಗಳು . ಮಗಳಿಗೆ 32 ವರ್ಷ ವಯಸ್ಸಾಗಿದ್ದು ಮಗಳನ್ನು ಮದುವೆ ಮಾಡಿ ಕೊಟ್ಟಿರುತ್ತೇವೆ. ನನ್ನ ಮಗ ಎಸ್ ಎಸ್ ಎಲ್ ಸಿ ರವರೆಗೆ ಓದಿದ್ದನು. ನನ್ನ ವಿದ್ಯಾಭ್ಯಾಸ ಮುಗಿದ ನಂತರ 16 ಹಸುಗಳ ಸಾಕಾಣಿಕೆ ಮಾಡುತ್ತಿದ್ದನು. ಆಗಿಂದಾಗ ಪಶು ವೈದ್ಯರು ಬಂದು ಹಸುಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಹಸುಗಳಿಗೆ ಶೆಡ್ ನ್ನು ತೋಟದ ಬಾವಿಯ ಹತ್ತಿರ ಮಾಡಿದ್ದೇವು. ಪರವಾನಗಿ ತೆಗೆದುಕೊಂಡು ಶಡ್ ನ್ನು ಮಾಡಿರುವುದಿಲ್ಲ. ಬಾವಿ ಇರುವ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

6) ಹಾಲನ್ನು ಡೈರಿಗೆ ಹಾಕುತ್ತಿದ್ದೆವು. ಹಾಲನ್ನು ಡೈರಿಗೆ ಹಾಕದ ಬಗ್ಗೆ ಡೈರಿಯವರು ಬುಕ್ ನಲ್ಲಿ ನಮೂದಿಸಿ ಕೊಡುತ್ತಿದ್ದರು. ಮೃತನ ಹೆಸರಿನಲ್ಲಿಯೇ ಹಾಲನ್ನು ಡೈರಿಗೆ ಹಾಕುತ್ತಿದ್ದ. ಡೈರಿಯ ಬುಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಹಸು ಮತ್ತು ಶಡ್ ನ ಪೋಟೊಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಮಗೆ 2 ಎಕರೆ ಜಮೀನು ಇರುತ್ತದೆ. ಜಮೀನು ನನ್ನ ಗಂಡ ಗುರುಸ್ವಾಮಿಯ ಹೆಸರಿನಲ್ಲಿರುತ್ತದೆ. ಜಮೀನಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

7) ಮೃತನಿಗೆ ವಾಹನ ಚಾಲನೆ ಮಾಡಲು ಡಿ ಎಲ್ ಇತ್ತು. ಯಾವ ಆರ್ ಟಿ ಒ ದಿಂದ ಡಿ ಎಲ್ ಪಡೆದಿರುತ್ತಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ಮೃತನು ಚಾಲನೆ ಮಾಡುತ್ತಿದ್ದ ಬೈಕ್ ಆತನ ಹೆಸರಿನಲ್ಲಿಯೇ ಇತ್ತು. ಬೈಕಿಗೆ ವಿಮೆ ಇರಲಿಲ್ಲ ಎನ್ನುವುದು ಸರಿ. ಅಪಘಾತವಾದಾಗ ಮೃತನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ಬೈಕಿನಲ್ಲಿ

ಮೂವರು ಪ್ರಯಾಣಿಸುತ್ತಿದ್ದು ಮೃತನು ಚಾಲನೆ ಮಾಡುತ್ತಿದ್ದ. ಬೈಕಿನಲ್ಲಿ ಮೃತನು, ರಜತ್ ಮತ್ತು ಹಿರಿಯಣ್ಣ ಇದ್ದರು.

8) ಅಪಘಾತವಾದ ಸ್ಥಳವನ್ನು ನಾನು ನೋಡಿರುತ್ತೇನೆ. ನನ್ನ ಮಗನಿಗೆ ಬೈಕ್ ಚಾಲನೇ ಮಾಡಲು ಬಾರದೇ ಆತನೇ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಮೂವರು ಬೈಕಿನಲ್ಲಿ ಪ್ರಯಾಣಿಸುತ್ತಿದ್ದ ಕಾರಣ ಬಾಲೆಂನ್ಸ್ ಸಿಕ್ಕದೇ ನನ್ನ ಮಗನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಶವಸಂಸ್ಕಾರಕ್ಕೆ ಖರ್ಚು ಮಾಡಿದ ಬಗ್ಗೆ ಬಿಲ್ ಗಳು ಇರುತ್ತವೆ. ಸದರಿ ಬಿಲ್ ಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

9) ಮೃತನಿಗೆ ತಿಂಗಳಿಗೆ ರೂ. 30 ಸಾವಿರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಮೃತನ ಆದಾಯ ಹೆಚ್ಚಿಗೆ ತೋರಿಸಿದ್ದೇವೆ ಎಂದರೆ ಸರಿಯಲ್ಲ. ಮೃತನು ಹಸು ಸಾಗಾಣಿಕೆ ಮಾಡುತ್ತಿರಲಿಲ್ಲ , ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಮಗೆ ಬಿ ಪಿ ಎಲ್ ಕಾರ್ಡ್ ಇರುತ್ತದೆ ಎಂದರೆ ಸರಿ. ಮೃತನ ತಪ್ಪಿನಿಂದ ಅಪಘಾತವಾಗಿರುವ ಕಾರಣ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಓ

ಸಾಕ್ಷಿದಾರರ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು .